**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**
**ಸಿಸಿ ನಂ.1746 /2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಮಳಖೇಡ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿರುಃ 1. ಧನರಾಜ ತಂದೆ ಸತೀಶ ಮಂಗಾ
ವಃ 23 ವರ್ಷ, ಉಃ ಕೂಲಿ ಕೆಲಸ
ಸಾಃ ನಿಜಲಿಂಗಪ್ಪ ನಗರ ಮಳಖೇಡ, ತಾಃ ಸೇಡಂ

2. ಸತೀಶ ತಂದೆ ಯಮುನಪ್ಪ ಮಂಗಾ
ವಃ 46 ವರ್ಷ, ಉಃ ಕೂಲಿ ಕೆಲಸ
ಸಾಃ ನಿಜಲಿಂಗಪ್ಪ ನಗರ ಮಳಖೇಡ, ತಾಃ ಸೇಡಂ

3. ಶಿವಬಾಯಿ ಗಂಡ ಸತೀಶ ಮಂಗಾ
ವಃ 43 ವರ್ಷ, ಉಃ ಮನೆ ಕೆಲಸ
ಸಾಃ ನಿಜಲಿಂಗಪ್ಪ ನಗರ ಮಳಖೇಡ, ತಾಃ ಸೇಡಂ

----

**ದೋ ಷಾ ರೋ ಪ ಣೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 09-05-2021 ರಂದು 06-30 ಗಂಟೆ ಸುಮಾರಿಗೆ ಮಳಖೇಡ ಪೋಲಿಸ್ ಠಾಣಾ ಹದ್ದಿಯ ಪೈಕಿ ಮಳಖೇಡ ಗ್ರಾಮದ ನಿಜಲಿಂಗಪ್ಪ ನಗರದಲ್ಲಿ ಚಾಸಾ 1 ಮತ್ತು ಚಾಸಾ 4 ಇಬ್ಬರು ಮನೆಯಲ್ಲಿದ್ದಾಗ ಆಪಾದಿತ 1 ಈತನು ಚಾಸಾ 1 ರವರ ತಾಯಿ ಚಾಸಾ 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ ನೀನು ರೂಪರಾಣಿ ಇವಳಿಗೆ ಆಸ್ತಿಯಲ್ಲಿ ಪಾಲು ಕೊಡಿಸಲು ನಿಂದೆ ಸಪೋರ್ಟ ಇದೆ ಅಂತಾ ಬೈದು ಸೀರೆ ಸೆರಗು ಹಿಡಿದು ಜಗ್ಗಾಡಿ ಮಾನ ಭಂಗ ಮಾಡುವ ರೀತಿಯಲ್ಲಿ ವರ್ತಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 354 ಸಹ ಕಲಂ 34ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಆರೋಪಿ 2, 3 ರವರಿಬ್ಬರು ಸಹ ಬಂದು ಚಾಸಾ 1 ಮತ್ತು 4 ಇಬ್ಬರಿಗೆ ನೀವು ಆಸ್ತಿಯಲ್ಲಿ ಪಾಲು ಕೇಳಿದ್ದಿರಿ ಅಂತಾ ಬೈದು ಕೈ ಹಿಡಿದು ಜಗ್ಗಾಡಿ ಕೈಯಿಂದ ನೂಕಿಸಿ ಕೊಟ್ಟಿರುತ್ತಾರೆ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 323 ಸಹ ಕಲಂ 34 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ಬಂದಿರುವುದು ಇರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು ಚಾಸಾ 1 ಮತ್ತು 4 ಇಬ್ಬರು ಮನೆಯಲ್ಲಿದ್ದಾಗ ಆರೋಪಿ 1 ಈತನು ಚಾಸಾ.1 ರವರ ತಾಯಿ ಚಾಸಾ 4 ರವರಿಗೆ ಎ ರಂಡಿ ಬೋಸಢಿ ಅಂತಾ ಅವಾಚ್ಯ ಶಬ್ದಗಳಿಂದ ಬೈದದ್ದು, ಹಾಗೂ ಆರೋಪಿ 2 ಮತ್ತು 3 ರವರಿಬ್ಬರೂ ಬಂದು ಚಾಸಾ 1 ಮತ್ತು 4 ಇಬ್ಬರಿಗೆ ರಂಢಿ ಬೋಸಡಿ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ಸಹ ಕಲಂ 34 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು ಆರೋಪಿತರೆಲ್ಲರೂ ಚಾಸಾ 1 ಮತ್ತು 4 ಇವರಿಗೆ ನೀವು ಆಸ್ತಿಯಲ್ಲಿ ಹೇಗೆ ಪಾಲು ತೆಗೆದುಕೊಳ್ಳುತ್ತಿರಿ ರಂಡಿ ಬೋಸಡಿ ಅಂತಾ ಬೈದು ನೀವು ಇನ್ನೋಮ್ಮೆ ಪಾಲು ಕೇಳಿದರೆ ನಿಮಗೆ ಖಲಾಸ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 506 ಸಹ ಕಲಂ 34ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 04-04-2025 ಪ್ರ.ದ.ನ್ಯಾ .ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**
**ಸಿಸಿ ನಂ.1746/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಮಳಖೇಡ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿತರುಃ ಧನರಾಜ ತಂದೆ ಸತೀಶ ಮಂಗಾ
ವಃ 23 ವರ್ಷ, ಉಃ ಕೂಲಿ ಕೆಲಸ
ಸಾಃ ನಿಜಲಿಂಗಪ್ಪ ನಗರ ಮಳಖೇಡ, ತಾಃ ಸೇಡಂ ಹಾಗೂ ಇತರರು

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಆ-3

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

ಆ-3

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 04-04-2025 ಪ್ರ.ದ.ನ್ಯಾ.ದಂ. ಸೇಡಂ.